# 14

# ಬಿದ್ದು ಹೋದವರ ಸಮಸ್ಯೆಯನ್ನು ಬಗೆಹರಿಸುವುದು

ಇಲ್ಲಿಯವರೆಗೆ ಈ ಪಾಠಗಳ ಸರಣಿಗಳಲ್ಲಿ ನಾವು ನಾಯಕತ್ವದ ಬೈಬಲಿನ ದೃಷ್ಟಿಕೋನವನ್ನು ಪ್ರಸ್ತುತಪಡಿಸಿದ್ದೇವೆ ಮತ್ತು ಸಭೆಯ ನಾಯಕರಿಗೆ ಅಗತ್ಯವಾದ ಹಲವಾರು ಕೌಶಲ್ಯಗಳಿಗೆ ಪೀಠಿಕೆಯನ್ನು ಒದಗಿಸಿದ್ದೇವೆ. ಈ ಮೂರನೆಯ ಭಾಗದಲ್ಲಿ, ಸಭೆಯ ನಾಯಕರಿಂದ ಎದುರಿಸಲ್ಪಡುವ ಅತೀ ಸಾಮಾನ್ಯವಾದ ಆಹ್ವಾನಗಳಲ್ಲಿ ಕೆಲವನ್ನು (ಕೆಲವರು ಅವುಗಳನ್ನು ಸಮಸ್ಯೆಗಳು ಎಂದು ಕರೆಯಬಹುದು) ನಾವು ಅಧ್ಯಯನ ಮಾಡುವೆವು.

ಸಭೆಯಲ್ಲಿಯ ನಾಯಕತ್ವದ ಮೇಲಿನ ಪುಸ್ತಕಗಳು ಸಾಕಷ್ಟು ವ್ಯಾವಹಾರಿಕವಾದವುಗಳಾಗಿರಲಿಕ್ಕಿಲ್ಲ. ಅವುಗಳನ್ನು ಓದಿದ ನಂತರ, ಸಭೆಯ ನಾಯಕರು, “ಈಗ ನಾನು ಎದುರಿಸುತ್ತಿರುವ ಸಮಸ್ಯೆಯನ್ನು ಪರಿಹರಿಸಲು ಇದು ಹೇಗೆ ಸಹಾಯ ಮಾಡಬಹುದು?” ಎಂದು ಕೇಳಬಹುದು. ಈ ಪಾಠಗಳು, ಪ್ರತಿಯೊಂದು ಸಭೆಯ ಸಮಸ್ಯೆಗೆ ಎಲ್ಲಾ ಪರಿಹಾರಗಳು ಯಾರಲ್ಲಿಯೂ ಸ್ಪಷ್ಟವಾಗಿ ಇರದಿದ್ದರೂ ಆ ಪ್ರಶ್ನೆಗೆ ಉತ್ತರಕೊಡಲು ಸಹಾಯ ಮಾಡುವ ಉದ್ದೇಶದವುಗಳಾಗಿರುತ್ತವೆ.

ನಾವು ಚರ್ಚಿಸಲು ಬಯಸುವ ಮೊದಲನೆಯ ಆಹ್ವಾನವು ಕರ್ತನ ಸಭೆಯಲ್ಲಿ ಬಿದ್ದು ಹೋದವರ ಸಮಸ್ಯೆಯಾಗಿರುತ್ತದೆ.[1]

## ಒಂದು ಪ್ರಮುಖ ಆಹ್ವಾನ

ಯಾವುದೇ ಸ್ಥಳಿಕ ಸಭೆಯು ಅಪನಂಬಿಗಸ್ತ ಸದಸ್ಯರ ಸಮಸ್ಯೆಯಿಂದ ಹೊರಗಾಗಿರುವದಿಲ್ಲ. ಹೊಸ ಒಡಂಬಡಿಕೆಯಲ್ಲಿ ಧರ್ಮಭ್ರಷ್ಟತೆಯು ಸಾಧ್ಯವಾದದ್ದೂ ಸಂಭವಿಸುವಂಥದ್ದೂ ಆಗಿತ್ತು. ಬಿದ್ದು ಹೋಗುವದರ ಬಗ್ಗೆ ಕ್ರೈಸ್ತರಿಗೆ ಎಚ್ಚರಿಕೆ ಕೊಡಲ್ಪಟ್ಟಿತ್ತು (1 ಕೊರಿಂಥ 10:12; ಇಬ್ರಿಯ 6:4-6), ಮತ್ತು ಕೆಲವರು ಬಿದ್ದು ಹೋದರೆಂದು ಹೇಳಲ್ಪಟ್ಟಿದೆ (ಗಲಾತ್ಯ 5:4; ಯಾಕೋಬ 5:19, 20). ಇಂದಿನ ದಿನದ ವಾಸ್ತವಿಕತೆಯೂ ಆಗಿದೆ; ಮಾರ್ಪಾಟ ಹೊಂದಿದವರಲ್ಲಿ ನೂರರಲ್ಲಿ ಐವತ್ತರಷ್ಟು ಜನರು ಬಿದ್ದು ಹೋಗಿರಬಹುದಾಗಿದೆ. ಯಾವುದೇ ಸಮಯಕ್ಕಾಗಿ, ಸಭೆಯು ಅಸ್ತಿತ್ವದಲ್ಲಿರುವ ಹೆಚ್ಚಾದ ಸಮಾಜಗಳಲ್ಲಿ ಈಗ ಸದಸ್ಯರಾಗಿರುವಷ್ಟು ಅಪನಂಬಿಗಸ್ತ ಸದಸ್ಯರು ಸದಸ್ಯರಾಗಿರುತ್ತಾರೆ.

ಇದು ಕೇವಲ ಒಂದು ಸಮಸ್ಯೆಯಾಗಿರುವದಿಲ್ಲ; ಇದೊಂದು ದುಃಖಕರ ಸಂಗತಿಯಾಗಿರುತ್ತದೆ. ಕ್ರೈಸ್ತರಾಗುವವರು ಮತ್ತು ಆಮೇಲೆ ಬಿದ್ದು ಹೋಗುವವರು ಎಂದೂ ಕರ್ತನಿಗೆ ವಿಧೇಯರಾಗದೇ ಇದ್ದದ್ದಕ್ಕಿಂತ ಹೆಚ್ಚು ಕೆಟ್ಟದಾದ ಪರಿಸ್ಥಿತಿಯಲ್ಲಿ ಇರುವರೆಂದು ಬೈಬಲ್ ಹೇಳುತ್ತದೆ (2 ಪೇತ್ರ 2:20-22). ನಿನ್ನ ಸ್ವಂತ ಕುಟುಂಬದಿಂದ ಒಬ್ಬ ಸಹೋದರನನ್ನು ಇಲ್ಲವೇ ಸಹೋದರಿಯನ್ನು ಕಳೆದು ಕೊಳ್ಳುವದನ್ನು ಕಲ್ಪಿಸಿಕೊಳ್ಳಿರಿ! ನಿನ್ನ ಒಬ್ಬ ಆತ್ಮಿಕ ಸಹೋದರನು ಬಿದ್ದು ಹೋಗುವಾಗ ಇದು ಸಂಭವಿಸುತ್ತದೆ!

ಬಹಳಷ್ಟು ಸಭೆಗಳು ರಕ್ಷಿಸಲ್ಪಟ್ಟವರನ್ನು ಉಳಿಸಿಕೊಳ್ಳಲು ಏನನ್ನೂ ಮಾಡುವದಿಲ್ಲ. ಹೊಸ ಸದಸ್ಯರನ್ನು ಮುಂದಿನ ಬಾಗಿಲಿನಲ್ಲಿ ಸ್ವಾಗತಿಸುತ್ತಾರೆ ಮತ್ತು ಹಿಂದಿನ ಬಾಗಿಲಿನ

ಮುಖಾಂತರ ಅವರನ್ನು ಕಳೆದುಕೊಳ್ಳುತ್ತಾರೆ. ನಾವು ಹಿಂದಿನ ಬಾಗಿಲನ್ನು ಮುಚ್ಚುವ ಅಗತ್ಯತೆಯಿದೆ!

ಸಮಸ್ಯೆಯನ್ನು ಪರಿಹರಿಸಲು ನಾವೇನನ್ನು ಮಾಡಬೇಕು? ಪರಿಹರಿಸುವದಕ್ಕೆ ಒಂದು ಮಾರ್ಗವನ್ನು ಇಬ್ರಿಯ 10:19-25ರಲ್ಲಿ ಕಂಡು ಕೊಳ್ಳಬಹುದು.

ಇಬ್ರಿಯರಿಗೆ ಬರೆದ ಪತ್ರಿಕೆಯು ಧರ್ಮಭ್ರಷ್ಟತೆಯ ಗಂಡಾಂತರದಲ್ಲಿದ್ದ ಕ್ರೈಸ್ತರಿಗೆ ಬರೆಯಲ್ಪಟ್ಟಿತು. ಸತ್ಯದಿಂದ ಬಿದ್ದು ಹೋಗುವದಕ್ಕೆ ವಿರುದ್ಧವಾಗಿ (2:1), "ದುಷ್ಟವಾದ, ಅಪನಂಬಿಕೆಯ ಹೃದಯವಿರುವದಕ್ಕೆ, ಜೀವಿಸುವ ದೇವರಿಂದ ಬಿದ್ದು ಹೋಗುವದಕ್ಕೆ ವಿರುದ್ಧವಾಗಿ ಅವರು ಎಚ್ಚರಿಸಲ್ಪಟ್ಟರು" (3:12), ಇಸ್ರಾಯೇಲ್ಯರು ಮಾಡಿದಂತೆ ಅವಿಧೇಯ ತೆಯಿಂದ ಬಿದ್ದು ಹೋಗುವದರ ಬಗ್ಗೆ (4:11), ಮತ್ತು ಅವರು ಮನಸಾಂತರ ಪಡಲು ಶಕ್ತರಾಗದಂಥ ಮಟ್ಟಕ್ಕೆ ಧರ್ಮಭ್ರಷ್ಟತೆಯಾಗದಂತೆ (6:4-6) ಎಚ್ಚರಿಸಲ್ಪಟ್ಟರು. (ನೋಡಿರಿ 6:7, 8; 10:26-31, 35, 39; 12:15-17.)

ಧರ್ಮಭ್ರಷ್ಟತೆಯ ಸ್ವಭಾವವು ವಿಚಿತ್ರವಾದ ಬೋಧನೆಗಳನ್ನು ಒಳಗೊಂಡಿತ್ತು (13:7-10); ಸಾಮಾನ್ಯವಾಗಿ ಸ್ವೀಕರಿಸಿದವರು ಯೆಹೂದಿ ಧರ್ಮವನ್ನು ಬಿಟ್ಟ ಯೆಹೂದಿ ಕ್ರೈಸ್ತರು, ಮೋಶೆಯ ಧರ್ಮಶಾಸ್ತ್ರವನ್ನು ಪುನಃ ಅಪ್ಪಿಕೊಳ್ಳುವ ಗಂಡಾಂತರದಲ್ಲಿದ್ದರು ಎಂದು ಯೋಚಿಸಲ್ಪಟ್ಟಿದೆ.

ಭಯಪಡಿಸಿದ್ದು ತತ್ವದ ಭ್ರಷ್ಟತೆಯು ಮಾತ್ರವೇ ಆಗಿರಲಿಲ್ಲ; ಅದು ಕಾರ್ಯಾಚರಣೆಯ ಧರ್ಮಭ್ರಷ್ಟತೆಯೂ ಆಗಿತ್ತು. ಅವರು "ಮಂದಮತಿಗಳಾಗುವ" ಗಂಡಾಂತರದಲ್ಲಿಯೂ ಇದ್ದರು (6:12). ಅವರು ಎದೆಗುಂದಿದವರು ಮತ್ತು ಉದಾಸೀನರು ಆಗಿದ್ದರು; "ಜೋಲು ಬಿದ್ದ ಕೈಗಳನ್ನು ನಡುಗುವ ಮೊಣಕಾಲುಗಳನ್ನೂ ಸುದಾರಿಸಿಕೊಳ್ಳಿರಿ" (12:12) ಎಂದು ಬರಹಗಾರನು ಹೇಳಿದನು. ಅವರು ಬೆಳೆಯಬೇಕಾದ ರೀತಿಯಲ್ಲಿ ಬೆಳೆದಿದ್ದಿಲ್ಲ (5:11-14), ಮತ್ತು ಅವರಲ್ಲಿ ಕೆಲವರು ಸಭೆಯಾಗಿ ಕೂಡಿ ಬರುವದನ್ನು ಬಿಟ್ಟು ಬಿಟ್ಟಿದ್ದರು (10:25).[2]

ಅವರ ಪರಿಸ್ಥಿತಿಯು ಪರಿಚಿತವಾದದ್ದಾಗಿ ಕೇಳಿಸುವುದು. ಇಂದು ಸಭೆಯ ನಾಯಕರು ಇಬ್ರಿಯರಿಗೆ ಬರೆದ ಪತ್ರಿಕೆಯು ಬರೆಯಲ್ಪಟ್ಟ ಎದುರಿಸಬೇಕಾದ ನಿರ್ದಿಷ್ಟವಾದ ಬೋಧನೆಗಳ ಬಗ್ಗೆ ಇಂದು ನಾವು ಎದುರಿಸಬೇಕಾಗಿರುವದಿಲ್ಲ, ಆದರೆ ಧರ್ಮಭ್ರಷ್ಟತೆಯು ಗಂಡಾಂತರದಲ್ಲಿಯ ಕ್ರೈಸ್ತರ ವರ್ಣನೆಯು ಆಧುನಿಕ ಸ್ಥಳಿಕ ಸಭೆಯ ಬಗ್ಗೆ ಮಾತಾಡುತ್ತಿರುವಂತೆ ಓದಲ್ಪಡುತ್ತದೆ. ಆದುದರಿಂದ, ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ಸೂಚಿಸಿದ ಸಮಸ್ಯೆಯು, ಮತ್ತು ವಿಶೇಷವಾಗಿ 10:19-25ರಲ್ಲಿಯದು, ಇಂದು ಸಮಯೋಚಿತವಾದದ್ದಾಗಿರುತ್ತದೆ. ಈ ವಾಕ್ಯಭಾಗವು ಸೂಚಿಸುವಂಥ ಯಾವುದು ಬಿದ್ದು ಹೋದವರ ಸಮಸ್ಯೆಯನ್ನು ಪರಿಹರಿಸಲು ಅಗತ್ಯವಾಗಿರುತ್ತದೆ?

## ಸರಿಯಾದ ಬೋಧನೆ

ಮೊದಲನೆಯದಾಗಿ, ಅದು ಸಭೆಗೆ ಸರಿಯಾದ ಬೋಧನೆ ಮಾಡುವ ಅಗತ್ಯತೆಯಿದೆಯೆಂದು ಸೂಚಿಸುತ್ತದೆ.

ಇಬ್ರಿಯರಿಗೆ ಬರೆದ ಪತ್ರಿಕೆಯು "ಹೆಚ್ಚು ಉತ್ತಮವಾದ" ವಿಚಾರವನ್ನು ಒತ್ತಿ ಹೇಳುತ್ತದೆ. ಕ್ರಿಸ್ತನ ಮತ್ತು ಆತನ ಮಾರ್ಗದ ಬಗ್ಗೆ ಪ್ರತಿಯೊಂದು ಮೋಶೆಯ ಧರ್ಮಶಾಸ್ತ್ರಕ್ಕೆ ಶ್ರೇಷ್ಠವಾದದ್ದಾಗಿದೆ. ನಮಗೆ ಹೆಚ್ಚು ಉತ್ತಮವಾದ ಮಧ್ಯಸ್ಥಗಾರನಿದ್ದಾನೆ (1:1, 2). ಧರ್ಮಶಾಸ್ತ್ರವನ್ನು ಕೊಟ್ಟ ದೇವದೂತರಿಗಿಂತ (2:2) ಯೇಸು ಕ್ರಿಸ್ತನು ಹೆಚ್ಚು ಉತ್ತಮನು (1:4-14). ಆತನು ಮೋಶೆಗಿಂತ ಹೆಚ್ಚು ದೊಡ್ಡವನು (3:3), ಮತ್ತು ಆತನ ಯಾಜಕತ್ವವು ಲೇವಿಯರ ಯಾಜಕತ್ವಕ್ಕಿಂತ ಹೆಚ್ಚು ಉತ್ತಮವಾದದ್ದು (7:7, 15, 16, 23-28). ಆತನ ಮುಖಾಂತರವಾಗಿ ಹೆಚ್ಚು ಉತ್ತಮವಾದ ನಿರೀಕ್ಷೆ (7:19), ಹೆಚ್ಚು ಉತ್ತಮವಾದ ಒಡಂಬಡಿಕೆ

(7:22; 8:6, 7) ಹೆಚ್ಚು ಉತ್ತಮವಾದ ವಾಗ್ದಾನಗಳ ಮೇಲಿರುವುದು (8:6), ಮತ್ತು ಹೆಚ್ಚು ಉತ್ತಮವಾದ ಯಜ್ಞದ ಮೇಲಿರುವುದು (9:9, 10, 12-14, 23; 10:1-4, 10-18). ಹೆಚ್ಚು ಉತ್ತಮವಾದ ಪರಿಶುದ್ಧ ಸ್ಥಳದಿಂದ ಆತನು ಸೇವೆ ಮಾಡುತ್ತಾನೆ (9:11, 23, 24; 12:18-24).

ಈ ಬೋಧನೆಯು ಕೆಲವು ಜನರಾದರೂ ಹಿಡಿದು ಕೊಂಡಿರುವ ತಪ್ಪಾದ ವಿಚಾರಗಳನ್ನು ವಿರೋಧಿಸುವದಕ್ಕಾಗಿ ಸ್ಪಷ್ಟವಾಗಿ ರೂಪಿಸಲ್ಪಟ್ಟಿತು. ಅದು 10:19-25ರಲ್ಲಿ ಕಂಡುಬರುವ ಪ್ರಬೋಧನೆಗಳಿಗಾಗಿ ಅಸ್ತಿವಾರವನ್ನು ಒದಗಿಸಿತು. ವಾಕ್ಯಭಾಗವು ಹೀಗಿದೆ,

> ಹೀಗಿರುವಲ್ಲಿ ಸಹೋದರರೇ, ಯೇಸು ನಮಗೋಸ್ಕರ ಪ್ರತಿಷ್ಠಿಸಿದ ಜೀವವುಳ್ಳ ಹೊಸ ದಾರಿಯಲ್ಲಿ ಆತನ ರಕ್ತದ ಮೂಲಕ ಆತನ ಶರೀರವೆಂಬ ತೆರೆಯ ಮುಖಾಂತರ ದೇವರ ಸಮಕ್ಷಮದಲ್ಲಿ ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು. ದೇವರ ಮನೆಯ ಮೇಲೆ ಅಧಿಕಾರಿಯಾಗಿರುವ ಶ್ರೇಷ್ಠನಾದ ಯಾಜಕನು ನಮಗಿದ್ದಾನೆ, ...

ಈ ರೀತಿಯಲ್ಲಿ ಪುಸ್ತಕದ "ತಾತ್ವಿಕ" ಸಂದೇಶವು ಸಂಕ್ಷೇಪಿಸಲ್ಪಟ್ಟಿದೆ: (1) ಯೇಸುವಿನ ರಕ್ತದ ಮುಖಾಂತರ ನಾವು ಪರಿಶುದ್ಧ ಸ್ಥಳವನ್ನು ಪ್ರವೇಶಿಸಬಹುದು, ಮತ್ತು (2) ದೇವರ ಮನೆಯ ಮೇಲೆ ಶ್ರೇಷ್ಠನಾದ ಯಾಜಕನು ಇದ್ದಾನೆ. ಉಲ್ಲಾಸ ಪಡಲು ಎಂಥಾ ಕಾರಣ! ಯಾವುದು ಹಿಂಬಾಲಿಸುವುದೋ ಅದಕ್ಕಾಗಿ ಎಂಥಾ ಆಶ್ಚರ್ಯಕರವಾದ ಕಾರಣಗಳು!

ಸಭೆಯ ಸದಸ್ಯರು ನಂಬಿಗಸ್ತರಾಗಿ ಉಳಿಯಲು ಸಭೆಯ ನಾಯಕರು ಸಹಾಯ ಮಾಡುವದನ್ನು ಇದು ಅನ್ವಯಿಸಿದರೆ, ಅವರು ಸಭೆಯು ಚೆನ್ನಾಗಿ ಕಲಿಸಲ್ಪಟ್ಟಿದೆ ಎಂದು ಭರವಸೆ ಕೊಡತಕ್ಕದ್ದು. ಸರಿಯಾದ ಬೋಧನೆ ಮಾತ್ರವೇ ಸಾಕಷ್ಟಾಗದು, ಆದರೆ ಅದಿಲ್ಲದೇ ಶಿಷ್ಯನಿಗೆ ಸಹಿಸಿಕೊಳ್ಳಲು ಅಸ್ತಿವಾರವು ಇರುವದಿಲ್ಲ. ತೆಳುವಾದ ಮಣ್ಣಿನಲ್ಲಿ ಬಿತ್ತಿದ ಬೀಜದಂತೆ, "ಕಷ್ಟವು ಇಲ್ಲವೇ ಹಿಂಸೆಯು ವಾಕ್ಯದ ನಿಮಿತ್ತವಾಗಿ ಬರುವಾಗ, ಕೂಡಲೇ ಅದು ಬಿದ್ದು ಹೋಗುತ್ತದೆ" (ಮತ್ತಾಯ 13:21ಬಿ).

ಕ್ರೈಸ್ತರು ಬೋಧಿಸಲ್ಪಡಲಿಕ್ಕೆ ಅಗತ್ಯವಾದ ತತ್ವಗಳಲ್ಲಿ ಕ್ರೈಸ್ತರಾಗಿ ನಾವು ಅನುಭವಿಸುವ ಆಶೀರ್ವಾದಗಳಿಗೆ ಪ್ರಾಧಾನ್ಯತೆಗಳು ಕೊಡಲ್ಪಡತಕ್ಕದ್ದೆಂದು ಸೂಚಿಸಲ್ಪಡಬಹುದು. ನಾವು ಬೆಲೆ ಕೊಡುವದರ ಬಗ್ಗೆ ನಾವು ಜಾಗರೂಕತೆ ವಹಿಸುತ್ತೇವೆ. ಕಾಲುಭಾಗವನ್ನು ಕಳೆದು ಕೊಳ್ಳುವದರ ಬಗ್ಗೆ ಯಾರೂ ಬಹಳ ಚಿಂತಿಸುವದಿಲ್ಲ, ಆದರೆ ಒಂದು ಮಿಲಿಯ ಡಾಲರಿನ ಕಾಲುಭಾಗವನ್ನು ಕಳೆದು ಕೊಳ್ಳದಂತೆ ಹೆಚ್ಚಾದ ಜನರು ಎಚ್ಚರಿಕೆಯಿಂದ ಇರುತ್ತಾರೆ. ಆದರೆ ನಿಜವಾಗಿಯೂ ನಾವು ದೇವರು "ಅಮೇಜಿಂಗ್ ಗ್ರೇಸ್"ದ ಕಾರಣದಿಂದ ಅದ್ಭುತಕರವಾದ ಅವಕಾಶಗಳಿಗೆ ಬೆಲೆ ಕಟ್ಟಿದರೆ, ಅವುಗಳಿಗೆ ಅಂಟಿಕೊಳ್ಳಲು ನಾವು ಎಚ್ಚರಿಕೆಯಿಲ್ಲದವರಾಗುವದಿಲ್ಲ.

## ಸತತವಾಗಿ ದೇವರ ಬಳಿಗೆ ಬರುವುದು

ಕ್ರಿಸ್ತನ ಮುಂಖಾಂತರ ಲಭ್ಯವಾಗಿರುವ ಆಶೀರ್ವಾದಗಳ ಬಗ್ಗೆ ಮಾತಾಡಿದ ನಂತರ (ಧರ್ಮಶಾಸ್ತ್ರದಿಂದ ಹೊಂದಿಕೊಳ್ಳಲಾರದಂಥವುಗಳು), ಬರಹಗಾರನು ಮೂರು ಆಜ್ಞಾಪನೆಗಳನ್ನು "Let us ..."ಎಂಬ ಪೀಠಿಕೆಗಳೊಂದಿಗೆ ಕೊಟ್ಟನು. ಮೊದಲನೆಯದು, "ಆದ ಕಾರಣ, ನೀನ ಪರಾಧಿಯೆಂದು ನಮ್ಮ ಮನಸ್ಸು ನಮಗೆ ಸಾಕ್ಷಿ ಹೇಳದಂತೆ ನಾವು ಹೃದಯವನ್ನು ಪ್ರೋಕ್ಷಿಸಿಕೊಂಡು ದೇಹವನ್ನು ತಿಳಿನೀರಿನಿಂದ ತೊಳೆದುಕೊಂಡು ಪರಿಪೂರ್ಣವಾದ ನಂಬಿಕೆ ಯುಳ್ಳವರಾಗಿಯೂ ಯಥಾರ್ಥ ಹೃದಯದವರಾಗಿಯೂ ದೇವರ ಬಳಿಗೆ ಬರೋಣ" (10:22). "ಪರಿಶುದ್ಧ ಸ್ಥಳವನ್ನು ಪ್ರವೇಶಿಸಲು ನಮಗೆ ಭರವಸೆ

ಇರುವದರಿಂದ" ಮತ್ತು "ದೇವರ ಮನೆಯ ಮೇಲೆ ಮಹಾ ಯಾಜಕನು ನಮಗಿರುವದರಿಂದ" ಎಂಬುದು ದೇವರ ಬಳಿಗೆ "ಹತ್ತಿರಕ್ಕೆ ಬರಲು" ನಮಗೆ ಇರುವ ದ್ವಾರವನ್ನು ಸಂತೋಷ ದಿಂದ ಉಪಯೋಗಿಸೋಣ ಎಂಬುದು ತಾರ್ಕಿಕವಾಗಿ ಬರುತ್ತದೆ. ಹಾಗೆ ಮಾಡದಿರುವುದು ಹುಚ್ಚುತನವಾಗಿದೆ; ಸೀಜನ್ ಟಿಕೇಟುಗಳಿದ್ದು ಅವುಗಳನ್ನು ಉಪಯೋಗಿಸದೇ ಇರುವಂತಿರುತ್ತದೆ, ಇಲ್ಲವೇ ಹೆಚ್ಚು ಯೋಗ್ಯವಾಗಿ, ಅರಸನೊಂದಿಗೆ ಭೋಜನಮಾಡಲು ಒಂದು ಆಮಂತ್ರಣವಿದ್ದು, ಅದನ್ನು ನಿರಾಕರಿಸುವಂತಿರುತ್ತದೆ.

ದೇವರ ಕೃಪೆಯು ಸಿಂಹಾಸನವನ್ನು ಕ್ರೈಸ್ತನು ಸಂದಿಸುವುದು ಹೇಗೆ? ಇಬ್ರಿಯ 10:22ರಲ್ಲಿ ನಾಲ್ಕು ವಿವರಣೆಗಳು ಕೊಡಲ್ಪಟ್ಟಿವೆ, ಆದರೆ ಅವು ಎಲ್ಲವೂ ಸಮಾಂತರವಾದವು ಗಳಾಗಿರುವದಿಲ್ಲ, "ನೀನಪರಾಧಿಯೆಂದು ನಮ್ಮ ಮನಸ್ಸು ನಮಗೆ ಸಾಕ್ಷಿ ಹೇಳದಂತೆ. ನಮ್ಮ ಹೃದಯವನ್ನು ಪ್ರೋಕ್ಷಿಸಿಕೊಂಡು," "ದೇಹವನ್ನು ತಿಳಿನೀರಿನಿಂದ ತೊಳೆದು ಕೊಂಡು" - ಇವೆರಡೂ ಪರ್ಫೆಕ್ಟ್ ಟೆನ್ಸ್‌ದಲ್ಲಿ ಇರುತ್ತವೆ. ಅವು ಹಿಂದಿನ ಸಮಯದಲ್ಲಿ ಕೃತ್ಯವು ಪರಿಪೂರ್ಣವಾದ ಮತ್ತು ಪರಿಣಾಮಗಳು ಉಳಿದು ಕೊಳ್ಳುವದರ ಬಗ್ಗೆ ಮಾತಾಡುತ್ತದೆ. ಈ ಕ್ರೈಸ್ತರಿಗೆ ಹಿಂದಿನ ಸಮಯದಲ್ಲಿ "ಅವರ ಹೃದಯಗಳು" "ಕುರಿಮರಿಯಾದಾತನ ರಕ್ತದಿಂದ ಪ್ರೋಕ್ಷಿಸಲ್ಪಟ್ಟವು" ಮತ್ತು ಅವರ "ದೇಹಗಳು ತೊಳೆಯಲ್ಪಟ್ಟವು"; ಅಂದರೆ ಅವರು ಬಾಪ್ತಿಸ್ಮ ಹೊಂದಿದರು. ಅವರು ಹೊರಗೂ ಒಳಗೂ ಶುದ್ಧೀಕರಿಸಲ್ಪಟ್ಟಂತೆ ಇದ್ದರು. ಪರಿಣಾಮವು ಇನ್ನೂ ಕಾರ್ಯ ರೂಪದಲ್ಲಿತ್ತು. ಅವರು ಇನ್ನೂ ಅವರನ್ನು ಬಾಪ್ತಿಸ್ಮವು ತಂದ ರೀತಿಯಲ್ಲಿಯೇ ಇತ್ತು. ಅವರು ಕ್ರೈಸ್ತರಾಗಿದ್ದರು, ಸಭೆಯ ಸದಸ್ಯರು ಹೊಸದಾಗಿ ಹುಟ್ಟಿದವರು, ಕೃಪೆಯಿಂದ ರಕ್ಷಿಸಲ್ಪಟ್ಟವರು ಆಗಿದ್ದರು.

ವಚನ 22ರಲ್ಲಿ ಮೂರನೆಯ ಮತ್ತು ನಾಲ್ಕನೆಯ ವಿವರಣೆಯು - "ಯಥಾರ್ಥವಾದ ಹೃದಯದಿಂದ" ಮತ್ತು "ವಿಶ್ವಾಸದ ಪೂರ್ಣಭರವಸೆಯಿಂದ" - ವರ್ತಮಾನ ಕಾಲದಲ್ಲಿ ಹೇಳುತ್ತದೆ. ಕ್ರೈಸ್ತನು ದೇವರ ಬಳಿಗೆ ಬರುವಂತೆ, "ಯಥಾರ್ಥವಾದ ಹೃದಯದಿಂದ" ಮತ್ತು "ವಿಶ್ವಾಸದ ಪೂರ್ಣಭರವಸೆಯಿಂದ," ದೇವರು ಅಲ್ಲಿರುವನೆಂದು ನಂಬುವದರಿಂದ; ಆತನು ಆಸಕ್ತನಾಗಿದ್ದಾನೆ, ಮತ್ತು ಆತನನ್ನು ಸಂಪರ್ಕಿಸ ಬಹುದು ಎಂದು ಹಾಗೆ ಮಾಡಬಹುದು!

ಈ ಕ್ರಿಯಾ ಪದವು "ಬಳಿಗೆ ಬರುವುದು" ವರ್ತಮಾನ ಕಾಲದಲ್ಲಿ ಇದ್ದದ್ದು, ಮುಂದರಿದ ಕಾಲದಲ್ಲಿ ಇರುವುದು ಮಹತ್ವದ್ದಾಗಿದೆ. ಆದುದರಿಂದ, ಅದು, "ನಾವು ಬಳಿಗೆ ಬರುತ್ತಲೇ ಇರೋಣ ..." ಎಂಬ ವಿಚಾರವನ್ನು ಹೊಂದಿಕೊಂಡಿರುತ್ತದೆ. ಒಂದು ಸಲಕ್ಕೆ ಮಾತ್ರ ವಾಚಕರು ದೇವರ ಬಳಿಗೆ ಬರಬೇಕೆಂದು ಲೇಖಕನು ಪ್ರಬೋಧಿಸುತ್ತಿರುವದಿಲ್ಲ, ಆದರೆ ದೇವರ ಬಳಿಗೆ ಬರುವದನ್ನು ಮುಂದುವರಿಸಬೇಕೆಂದು ಹೇಳುತ್ತಿದ್ದಾನೆ.

ಆದುದರಿಂದ, ವಾಕ್ಯಭಾಗವು ಬಾಪ್ತಿಸ್ಮ ಹೊಂದಿದವರು ದೇವರ ಬಳಿಗೆ ಯಥಾರ್ಥತೆಯಲ್ಲಿ ಮತ್ತು ನಂಬಿಕೆಯಲ್ಲಿ ಬರುತ್ತಲೇ ಇರಬೇಕೆಂದು ಉಪದೇಶಿಸುತ್ತಿದ್ದಾನೆ. ಹಾಗೆ ಮಾಡುವುದು ಕ್ರೈಸ್ತನು ದೇವರಿಗೆ ಕ್ರಮಪ್ರಕಾರವಾಗಿ ಪ್ರಾರ್ಥನೆಯ ಮುಖಾಂತರ ಮಾತಾಡುವದನ್ನು ಕೇಳುತ್ತದೆ ಹಾಗೂ ದೇವರು ತನ್ನ ವಾಕ್ಯದ ಮುಖಾಂತರ ಅವನೊಂದಿಗೆ ಮಾತಾಡುವಂತೆ ಬಿಡುತ್ತದೆ. ಒಬ್ಬ ಕ್ರೈಸ್ತನಿಗೆ ಅಮೂಲ್ಯವಾದ ಧ್ಯಾನದ ಜೀವನ ಇದ್ದರೆ, ಅವನನ್ನು ಯಾವಾಗಲೂ ದೇವರ ಬಳಿಗೆ ತರುವ ದೈನಂದಿನ ಚಟುವಟಿಕೆಗಳನ್ನೊಳ ಗೊಂಡಿದ್ದರೆ, ಅವನು ಬಿದ್ದು ಹೋಗುವ ಅವಕಾಶವಿರುವದಿಲ್ಲ.

## ನಂಬಿಕೆಯನ್ನು ಬಲವಾಗಿ ಹಿಡಿದುಕೊಂಡಿರುವುದು

ಇಬ್ರಿಯ 10:22-25ರಲ್ಲಿ ಕಂಡು ಬಂದ ಎರಡನೆಯ ಅಗತ್ಯತೆಯು, "ನಮ್ಮ ನಿರೀಕ್ಷೆ ಯನ್ನು ಕುರಿತು ನಾವು ಮಾಡಿದ ಪ್ರತಿಜ್ಞೆಯನ್ನು ನಿಶ್ಚಂಚಲವಾಗಿ ಪರಿಗ್ರಹಿಸೋಣ; ವಾಗ್ದಾನ ಮಾಡಿದಾತನು ನಂಬಿಗಸ್ತನು" (ವಚನ 23). ಇಬ್ರಿಯರಿಗೆ ಬರೆದ ಪತ್ರಿಕೆಯು ಬರೆಯಲ್ಪಟ್ಟ

ಕ್ರೈಸ್ತರು ಹಿಂಸೆಯನ್ನು ಶ್ರಮೆಯನ್ನೂ ಬಹುಶಃ ಎದುರಿಸುತ್ತಿದ್ದರು. ಅಂಥ ಸಮಯದಲ್ಲಿ ಅವರಿಗೆ ಯಾವುದರ ಅಗತ್ಯತೆ ಇತ್ತು? ಅವರಿಗೆ ತಾಳ್ಮೆಯು (10:36; 12:7), ಸಹನೆಯು (12:1) ಮತ್ತು ನಂಬಿಕೆಯು, ವಿಶೇಷವಾಗಿ ನಂಬಿಗಸ್ತಿಕೆಯ ಅರ್ಥದಲ್ಲಿ (10:39; 11) ಅಗತ್ಯವಾಗಿತ್ತು. 10:23ರಲ್ಲಿ ಅವರು ತಮ್ಮ ಅರಿಕೆಯನ್ನು - ತಮ್ಮ ಧರ್ಮವನ್ನು, ತಮ್ಮ ನಂಬಿಕೆಯನ್ನು "ಬಲವಾಗಿ ಹಿಡಿದುಕೊಂಡಿರಬೇಕು" ಎಂದು ಲೇಖಕನು ಹೇಳಿದನು. "ಬಿಗಿಯಾದ ವಿಶ್ವಾಸ" ಎಂದು ಕರೆಯಲ್ಪಡುವಂಥದ್ದು - ಸಹಿಸಿಕೊಳ್ಳುವ ನಂಬಿಕೆ, ಉಳಿದುಕೊಳ್ಳುವ, "ಬಿಗಿಯಾಗಿ ನೇತಾಡುವ" ಎಂದು ಕರೆಯಲ್ಪಡುವಂಥದ್ದು - ಕ್ರೈಸ್ತನಿಗೆ ಏನೇ ಸಂಭವಿಸಿದರೂ ಅವರಿಗೆ ಅಗತ್ಯವಾಗಿತ್ತು.

ಕ್ರೈಸ್ತರು ಯಾಕೆ ನಂಬಿಕೆಯನ್ನು "ಗಟ್ಟಿಯಾಗಿ" ಹಿಡಿದು ಕೊಂಡಿರಬೇಕು? ಯಾಕಂದರೆ ನಮಗೆ ನಿರೀಕ್ಷೆಯನ್ನು ಕೊಡುವಾತನು ನಂಬಿಗಸ್ತನಾಗಿದ್ದಾನೆ, ಆತನು ತನ್ನ ವಾಗ್ದಾನಗಳನ್ನು ಕೈ ಕೊಳ್ಳುವನು. ಆತನು ವಾಗ್ದಾನ ಮಾಡಿದ್ದನ್ನು ನಮಗೆ ಮಾಡುವನು. ಯಾವುದೇ ನಂಬಿಗಸ್ತನಿಗೆ ಇದು ಎಂಥ ಅದ್ಭುತಕರವಾದ ಕೊಡುಗೆಯಾಗಿದೆ!

ಸಭೆಯ ನಾಯಕರು ಈ "ಬಿಗಿಯಾದ ನಂಬಿಕೆಯನ್ನು" ಶಿಷ್ಯರು ಎದುರಿಸುವ ತೊಂದರೆಗಳ ಬಗ್ಗೆ ಹೊಸ ಕ್ರೈಸ್ತರಿಗೆ ಮುನ್ನೆಚ್ಚರಿಕೆ ಕೊಡುವದರ ಮುಖಾಂತರ ಈ ಬೆಳವಣಿಗೆಯನ್ನು ಹುಡುಕಬಹುದು. ನೂತನ ಸದಸ್ಯರನ್ನು ನಂಬಿಗಸ್ತಿಕೆಯಲ್ಲಿ ಉಳಿದುಕೊಳ್ಳುವ ತೊಂದರೆಗಳನ್ನು ಬಹಿರಂಗಪಡಿಸುವ ಆದರೆ "ಸುರಕ್ಷಿತವಾದ" ಪರಿಸ್ಥಿತಿಯಲ್ಲಿ ಮಾಡಲ್ಪಡುವ ಚರ್ಚೆಯ ಕ್ಲಾಸುಗಳು ಮತ್ತು ಸೇವೆಯ ಯೋಜನೆಗಳು ಆತ್ಮಿಕವಾಗಿ ಗಂಡಾಂತರ ಕಾರಿಯಾದ "ನಿಜ ಜಗತ್ತಿನೊಳಗೆ" ಅವರನ್ನು ಬಲಪಡಿಸಲು ಉಪಯೋಗಿಸಲ್ಪಡಬಹುದು.

## ಪರಸ್ಪರ ಪ್ರೋತ್ಸಾಹ

24 ಮತ್ತು 25 ವಚನಗಳಲ್ಲಿ ಕಂಡು ಬಂದ ಇಬ್ರಿಯ 10:22-25ರ ಮೂರನೆಯ ಅಗತ್ಯತೆಯು ಹೀಗಿವೆ: "ನಾವು ಪರಸ್ಪರ ಹಿತ ಚಿಂತಕರಾಗಿದ್ದು ಪ್ರೀತಿಸುತ್ತಿರಬೇಕೆಂತಲೂ ಸತ್ಕಾರ್ಯ ಮಾಡಬೇಕೆಂತಲೂ ಒಬ್ಬರನ್ನೊಬ್ಬರು ಪ್ರೇರೇಪಿಸೋಣ. ಸಭೆಯಾಗಿ ಕೂಡಿಕೊಳ್ಳುವದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟು ಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ. ಕರ್ತನ ಪ್ರತ್ಯಕ್ಷತೆಯ ದಿನವು ಸಮೀಪಿಸುತ್ತಾ ಬರುತ್ತದೆ ಎಂಬುದನ್ನು ನೀವು ನೋಡುವದರಿಂದ ಇದನ್ನು ಮತ್ತಷ್ಟು ಮಾಡಿರಿ."

ಇದು ಬಿದ್ದು ಹೋದವರ ಸಮಸ್ಯೆಯನ್ನು ಬಗೆ ಹರಿಸುವುದಕ್ಕೆ ಬೀಗದ ಕೈಯಾಗಿರಬಹುದು. ಸಭೆಯ ನಾಯಕರು ಪ್ರತಿಯೊಬ್ಬ ಸದಸ್ಯನಿಗೆ ಅವನು ಇಲ್ಲವೇ ಆಕೆಯು ತನ್ನ ಮುಂದಿರಿದ ಆತ್ಮಿಕ ಬೆಳವಣಿಗೆಯ ಮುಖಾಂತರ ನಂಬಿಗಸ್ತರಾಗುವ ಜವಾಬ್ದಾರಿಕೆಯಿರುವದನ್ನು ಬೋಧಿಸುವ ಅಗತ್ಯತೆಯಿದೆ. (ನೋಡಿರಿ ಗಲಾತ್ಯ 6:5 ಮತ್ತು ಯೂದ 21.) ಹೀಗಿದ್ದರೂ, ನಂಬಿಗಸ್ತರಾಗಿ ಉಳಿಯುವದಕ್ಕೆ ನಾವು ಕೊಡಬೇಕಾದ ಮತ್ತು ಒಬ್ಬರಿಂದೊಬ್ಬರು ಸ್ವೀಕರಿಸಬೇಕಾದ ಪ್ರೋತ್ಸಾಹದ ಅಗತ್ಯತೆಯಿರುತ್ತದೆ.

ಈ ಪರಸ್ಪರ ಪ್ರೋತ್ಸಾಹದ ಬಗ್ಗೆ ಇಬ್ರಿಯರಿಗೆ ಬರೆದ ಪತ್ರಿಕೆಯ ಲೇಖಕನು ಆರು ಸತ್ಯಗಳನ್ನು ಪ್ರಸ್ತಾಪಿಸಿದ್ದಾನೆ: (1) ಅದು ಜಾಗರೂಕತೆಯ ವಿಚಾರದ ಪರಿಣಾಮವಾಗಿರಬೇಕು. "ಒಬ್ಬರನ್ನೊಬ್ಬರು ಪ್ರೀತಿಸುವದನ್ನು ಮತ್ತು ಒಳ್ಳೇ ಕೃತ್ಯಗಳನ್ನು ಹೇಗೆ ಪ್ರೇರೇಪಿಸಬೇಕೆಂಬುದನ್ನು ನಾವು ಯೋಚಿಸತಕ್ಕದ್ದು." ಅದನ್ನು ಸಾಧಿಸುವದಕ್ಕೆ ಅತ್ಯುತ್ತಮ ಮಾರ್ಗಗಳಿಗಾಗಿ ನಾವು ನೋಡುತ್ತಿರಬೇಕೆಂದು ಇದು ಸೂಚಿಸುತ್ತದೆ. (2) ಇದು "ಪ್ರಚೋದನೆಯನ್ನು" ಒಳಗೊಂಡಿರತಕ್ಕದ್ದು. "ಒಬ್ಬರನ್ನೊಬ್ಬರು ಪ್ರೇರೇಪಿಸಬೇಕು," ಎಂದು ಲೇಖಕನು ಹೇಳಿದನು, ಇದರ ಅರ್ಥ ಕದಲಿಸು, ಉತ್ತೇಜಿಸು, ದೂಡು, ಇಲ್ಲವೇ ಪ್ರೇರಿಸು ಎಂದಾಗುತ್ತದೆ. (3) ಅದು ಹೆಚ್ಚು ದೊಡ್ಡ ಪ್ರೀತಿಗೆ ಮತ್ತು ಒಳ್ಳೆಯ ಕಾರ್ಯಗಳಿಗೆ ನಡಿಸತಕ್ಕದ್ದು. ಕ್ರೈಸ್ತರು,

"*ಪ್ರೀತಿಸುವುದಕ್ಕಾಗಿ ಮತ್ತು ಒಳ್ಳೆಯ ಕೃತ್ಯಗಳಿಗಾಗಿ ಒಬ್ಬರನ್ನೊಬ್ಬರು ಪ್ರೇರೇಪಿಸತಕ್ಕದ್ದು*" ಕೋಪಗೊಳಿಸುವದಕ್ಕೆಲ್ಲ ಇಲ್ಲವೇ ಕೆಟ್ಟ ಕಾರ್ಯಗಳಿಗಾಗಿ ಅಲ್ಲ. (4) ಅದು ಸಭೆಯ ಕೂಟಗಳಲ್ಲಿ ಹಾಗೆಯೇ ಬೇರೆ ಸಮಯಗಳಲ್ಲಿ ಸಂಭವಿಸತಕ್ಕದ್ದು. ವಾಕ್ಯಭಾಗವು "ಸಭೆಯಾಗಿ ಕೂಡಿ ಬರುವದನ್ನು ಮರೆತು ಬಿಟ್ಟಿದ್ದಕ್ಕೆ" ವಿರುದ್ಧವಾಗಿ ಎಚ್ಚರಿಕೆಯನ್ನು ಕೊಡುತ್ತಾನೆ, ಮತ್ತು "ಒಬ್ಬರಿಗೊಬ್ಬರು ಪ್ರೋತ್ಸಾಹಿಸುವದನ್ನು ಅಂಥ ಮರೆತು ಬಿಡುವಿಕೆಗೆ ವಿರುದ್ಧವಾಗಿ ಹೇಳು ತ್ತಾನೆ." ಸಭೆಯು ಕೂಡಿ ಬರುವಾಗ ಏನಾದರೂ ಸಂಭವಿಸಿದರೆ, ಪರಸ್ಪರ ಪ್ರೋತ್ಸಾಹವು ಪರಿಣಾಮಗೊಳ್ಳತಕ್ಕದ್ದು. (5) ಅದು ಜೀವನಕ್ಕೆ ಅರ್ಥ ಕೊಡುವ ಅಂತಿಮ ಘಟನೆಯನ್ನು ಜ್ಞಾಪಿಸಿಕೊಳ್ಳುವಾಗ ಮಾಡಲ್ಪಡಬೇಕು: ಕರ್ತನ ದಿನ; ದ್ವಿತೀಯ ಆಗಮನ, "ದಿನವು ಹತ್ತಿರ ಬರುವದನ್ನು ನೋಡುವಂತೆ" ಒಬ್ಬರನ್ನೊಬ್ಬರ ಪ್ರೋತ್ಸಾಹಿಸುವ ಅಗತ್ಯತೆ ಇರುತ್ತದೆ.[3] (6) ಅದು ಮುಖ್ಯವಾದದ್ದಾಗಿದೆ ಯಾಕಂದರೆ ಧರ್ಮಭ್ರಷ್ಟತೆಗೆ ಪಾಪದಲ್ಲಿ ಛಲ ಹಿಡಿಯುವುದು - ಭಯಂಕರವಾದ ಪರಿಣಾಮಗಳಿರುವವು (10:26-31).

ಇಬ್ರಿಯರಿಗೆ ಬರೆದ ಪತ್ರಿಕೆಯು ಪರಸ್ಪರ ಪ್ರೋತ್ಸಾಹವನ್ನು ಒತ್ತಾಯ ಪಡಿಸುವುದು ಇದು ಮೊದಲನೆಯ ಸಲವಾಗಿರುವದಿಲ್ಲ. ಅರಣ್ಯದಲ್ಲಿ ಬಿದ್ದು ಹೋದ ಇಸ್ರಾಯೇಲ್ಯರ ಉದಾಹರಣೆಯನ್ನು ಉಪಯೋಗಿಸಿದ ನಂತರ, ಲೇಖಕನು ಹೀಗೆ ಹೇಳಿದನು, "ಸಹೋದ ರರೇ ನೋಡಿಕೊಳ್ಳಿರಿ, ಜೀವಸ್ವರೂಪನಾದ ದೇವರನ್ನು ಬಿಟ್ಟು ಹೋಗುವ ಅಪನಂಬಿಕೆಯುಳ್ಳ ಕೆಟ್ಟ ಹೃದಯವು ನಿಮ್ಮೊಳಗೆ ಯಾವನಲ್ಲಿಯೂ ಇರಬಾರದು. ನಿಮ್ಮಲ್ಲಿ ಒಬ್ಬರಾದರೂ ಪಾಪದಿಂದ ಮೋಸಹೋಗಿ ಕಠಿನರಾಗದಂತೆ ಈ ಹೊತ್ತು ಎಂಬ ಕಾಲವು ಇರುವ ತನಕ ಪ್ರತಿನಿತ್ಯವೂ ಒಬ್ಬರನ್ನೊಬ್ಬರು ಎಚ್ಚರಿಸಿರಿ" (3:12, 13). ಬಹುಶಃ ಈ ವಾಕ್ಯ ಭಾಗದ ಮಹತ್ವದ ವಿಷಯವು ಅದರ ಬೋಧನೆಗಾಗಿ *ಅನುದಿನದ* ಅಗತ್ಯತೆಯಾಗಿರುತ್ತದೆ. ಸಭೆಯ ಸದಸ್ಯರು ಆ ಅಗತ್ಯತೆಯನ್ನು ಪೂರೈಸಲಾರರು ಯಾಕಂದರೆ ಅವರ ಒಬ್ಬರಿಗೊಬ್ಬರ ಕೇವಲ ಸಂಪರ್ಕವು ಬಹಿರಂಗ ಕೂಟಗಳಲ್ಲಿ ಇರುವುದು.

ಕ್ರಮಪ್ರಕಾರವಾದ ಪರಸ್ಪರ ಪ್ರಬೋಧನೆಗಾಗಿ ಮತ್ತು ಪ್ರೋತ್ಸಾಹಕ್ಕಾಗಿ ಅಗತ್ಯತೆಯು ಧರ್ಮಭ್ರಷ್ಟತೆಯ ತೆರೆಯನ್ನು ತೆಗೆದು ಹಾಕಲು ಕಾರ್ಯಕ್ರಮದ ಮೂರು ಭಾಗಗಳನ್ನು ಸೂಚಿಸುವುದು.

*ಮೊದಲನೆಯದು ಒಬ್ಬರೊಬ್ಬರ ಜವಾಬ್ದಾರಿಕೆ ಇರುತ್ತದೆ.* ನಾವು ಒಬ್ಬರಿಗಾಗಿ ಒಬ್ಬರು ವಿಶೇಷವಾಗಿ ಹೊಸದಾಗಿ ಮಾರ್ಪಾಟ ಹೊಂದಿದವರ ಜವಾಬ್ದಾರಿಕೆಯನ್ನು ಹೊತ್ತು ಕೊಳ್ಳಬೇಕು. ನಾವು ನಮ್ಮ ಸಹೋದರರ ಕಾವಲುಗಾರರು ಎಂದು ಬೈಬಲ್ ಬೋಧಿಸುತ್ತದೆ. (ನೋಡಿರಿ ಗಲಾತ್ಯ 6:2.) ಇತರರಿಗಾಗಿ ಸಭಾ ನಾಯಕರಿಗೆ ವಿಶೇಷ ವಾದ ಜವಾಬ್ದಾರಿಕೆಯಿರುತ್ತದೆ: ಲೆಕ್ಕ ಕೊಡಬೇಕಾದವರಂತೆ ಅವರು ಮಂದೆಯ ಆತ್ಮಗಳನ್ನು ಕಾಯಬೇಕಾಗಿದೆ (ಇಬ್ರಿಯ 13:17). ಇದಲ್ಲದೇ, ಒಂದು ಒಳ್ಳೇ ಕುಟುಂಬವು ಪ್ರತಿಯೊಬ್ಬ ಇತರರಿಗಾಗಿ ಜವಾಬ್ದಾರಿಕೆಯುಳ್ಳದ್ದಾಗಿರುವಂತೆ, ಸಭೆಯ ಕುಟುಂಬದಲ್ಲಿ ಪ್ರತಿಯೊಬ್ಬ ಸದಸ್ಯನು ಇತರ ಪ್ರತಿಯೊಬ್ಬ ಸದಸ್ಯನಿಗಾಗಿ ಜವಾಬ್ದಾರಿಕೆ ಯುಳ್ಳವನಾಗಿರತಕ್ಕದ್ದು. "ನಾವು ಒಬ್ಬರಿಗೊಬ್ಬರು ಅಂಗಗಳಾಗಿದ್ದೇವಲ್ಲಾ" ಎಂದು ಪೌಲನು ಹೇಳಿದನು (ಎಫೆಸ 4:25ಬಿ).

*ಎರಡನೆಯದು ನಿಕಟ ಸಂಬಂಧಗಳು.* ಕ್ರೈಸ್ತರು ಇತರ ಕ್ರೈಸ್ತರೊಂದಿಗೆ ನಿಕಟ ಬಂಧನಗಳನ್ನು ಸ್ಥಾಪಿಸತಕ್ಕದ್ದು. ನಮ್ಮ ನಿಕಟ ಸ್ನೇಹಿತರಿಂದ ಪ್ರೋತ್ಸಾಹವು ಬಹಳ ಪರಿಣಾಮಕಾರಿಯಾಗಿ ಬರುತ್ತದೆ. ಇದಲ್ಲದೆ, ಇತರ ಕ್ರೈಸ್ತರೊಂದಿಗೆ ನಮ್ಮ ನಿಕಟ ಸಂಬಂಧವು, ನಾವು ನಂಬಿಗಸ್ತರಾಗಿ ನಿಲ್ಲುವೆವೋ ಇಲ್ಲವೋ ಎಂಬುದರ ಬಗ್ಗೆ ತೀರ್ಮಾನಿಸುವಂಥದ್ದಕ್ಕೆ ಪುರಾವೆ ಇರುತ್ತದೆ.

1973ರಲ್ಲಿ ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ನಾವು ಸೇವೆ ಮಾಡಿದ ಸಭೆಯ ಮೊದಲಿನ

ಐದು ವರ್ಷಗಳ ಸಭೆಯ ಬೆಳವಣಿಗೆಯ ಬಗ್ಗೆ ಸಂಶೋಧನೆ ಮಾಡಿದೆನು. ಇತರರಿಗಿಂತ ಮಾರ್ಪಾಟ ಹೊಂದಿದ ಮೂರು ಗುಂಪುಗಳು ನಂಬಿಗಸ್ತರಾಗಿ ಉಳಿಯುವರೆಂದು ಕಂಡು ಕೊಂಡೆನು: (1) ಅವರು ಮಾರ್ಪಾಟ ಹೊಂದಿದಾಗ ಸಭೆಯಲ್ಲಿ ಅವರ ನಿಕಟ ಸ್ನೇಹಿತರು ಇಲ್ಲವೇ ಸಂಬಂಧಿಕರು ಇದ್ದವರು, (2) ಅವರು ಮಾರ್ಪಾಟ ಹೊಂದುವದಕ್ಕಿಂತ ಮೊದಲು ಬಹಳ ಸಮಯದಿಂದ ಸಭೆಯ ಆರಾಧನೆಗಳಲ್ಲಿ ಭಾಗವಹಿಸುತ್ತಿದ್ದವರು, ಮತ್ತು (3) ಇಪ್ಪತ್ತೈದು ವರ್ಷಕ್ಕಿಂತ ಕಡಿಮೆ ವಯಸ್ಸಿದ್ದವರು. *ಈ ಮೂರು ಉದಾಹರಣೆಗಳಲ್ಲಿ, ಮಾರ್ಪಾಟಹೊಂದಿದವರಿಗೆ ಅವರು ಬಾಪ್ತಿಸ್ಮ ಹೊಂದುವದಕ್ಕಿಂತ ಮೊದಲೇ ಸದಸ್ಯ ರೊಂದಿಗೆ ನಿಕಟವಾದ ವೈಯಕ್ತಿಕ ಸಂಬಂಧಗಳಿದ್ದವು.* ಭಾಗವಹಿಸುತ್ತಿದ್ದವರು ಆಗಲೇ ಸಭೆಯಲ್ಲಿಯ ಜನರೊಂದಿಗೆ ಸ್ನೇಹ ಬೆಳೆಸಿದ್ದರು ಮತ್ತು ಇಪ್ಪತ್ತೈದು ವರ್ಷ ಕೆಳಗಿನ ವಯಸ್ಸಿನ ಹೆಚ್ಚಾದವರೆಲ್ಲರೂ ಪ್ರತೀ ಶುಕ್ರವಾರ ಕೂಡಿ ಬರುತ್ತಿದ್ದ ಯುವ ಜನರ ಗುಂಪಿನ ಸದಸ್ಯರಾ ಗಿದ್ದರು.

ಫ್ಲಾವಿಲ್ ಯೀಕ್ಲಿ, ಜೂನಿಯರ್ ಅವರು *Why Churches Grow,* ಎಂಬುದರಲ್ಲಿ ತನ್ನ ಸಂಶೋಧನೆಯು ಹೊಸದಾಗಿ ಮಾರ್ಪಾಟ ಹೊಂದಿದವರು ತಮ್ಮ ಸ್ನೇಹತ್ವದ ವಿಧಾನವನ್ನು ಬದಲಾಯಿಸಿದರೆ ಅವರು ಮಾರ್ಪಾಟ ಹೊಂದಿದವರಾಗಿ ಉಳಿದು ಕೊಳ್ಳ ಬಹುದು ಎಂಬುದನ್ನು ತೋರಿಸಿತು ಎಂದು ಹೇಳಿದರು.[4] "ಸಭೆಯ ಸದಸ್ಯರೊಂದಿಗೆ ವಿಷಯಗಳು ವೈಯಕ್ತಿಕ ಸಂಬಂಧಗಳನ್ನು ರೂಪಿಸಿದಾಗ, ಅವರು ನಂಬಿಗಸ್ತರಾಗಿ ಉಳಿದು ಕೊಳ್ಳ ಬಹುದಾಗಿದೆ ಎಂದು ಈ ಮೂಲ ಸಿದ್ಧಾಂತಗಳು ಸೂಚಿಸುತ್ತವೆ. ಅವರು ಅಂಥ ವೈಯಕ್ತಿಕ ಸಂಬಂಧಗಳನ್ನು ರೂಪಿಸದೇ ಇದ್ದಾಗ, ಅವರು ಸಭೆಯಿಂದ ಬಿದ್ದು ಹೋಗ ಲಿಕ್ಕಿರಬಹುದು"[5] ಎಂದು ಹೇಳಿದರು. ಒಬ್ಬ ಹೊಸ ಸದಸ್ಯನು ಆರು ತಿಂಗಳಲ್ಲಿ ಸಭೆಯಲ್ಲಿ ಏಳು ಸ್ನೇಹಿತರನ್ನು ಮಾಡದಿದ್ದರೆ (ಇಲ್ಲವೇ ಈಗಲೇ ಇದ್ದರೆ) ಅವನು ಬಹುಶಃ ಬಿದ್ದು ಹೋದ ವನಾಗುವನು[6] ಎಂದು ಅವರ ಸಂಶೋಧನೆ ತೋರಿಸಿತು. ಇದು ಇನ್ನೊಂದು ರೀತಿಯಲ್ಲಿ ಹೇಳುವುದಾಗಿದೆ, ನೂತನವಾಗಿ ಮಾರ್ಪಟ್ಟವರು ಸಭೆಯೊಳಗೆ ನಿಕಟವಾದ ವೈಯಕ್ತಿಕ ಸಂಬಂಧಗಳನ್ನು ರೂಪಿಸದಿದ್ದರೆ, ಅವರು ಬಹುಶಃ ಬಿದ್ದು ಹೋಗುವರು.

ಸ್ಥಾಪಿಸಲ್ಪಟ್ಟ ಸಂಬಂಧದ ರೀತಿಯು ಮಹತ್ವದ್ದಾಗಿದೆ; ಹೊಸದಾದ ಸದಸ್ಯರು ಇತರ ಕ್ರೈಸ್ತರೊಂದಿಗೆ ವಿಶೇಷ ಸಂಬಂಧದ ಅಗತ್ಯತೆಯುಳ್ಳವರಾಗಿರುವರು. ಅದು ನಿಕಟವಾಗಿ ರತಕ್ಕದ್ದು - ಆರಾಧನೆಯ ನಂತರ ಕೇವಲ "ಹೆಲ್ಲೋ" ಎಂದು ಹೇಳುವದಕ್ಕಿಂತ ಆಳವಾ ದದ್ದಾಗಿರಬೇಕು. *ಅದು ಬೇಗನೇ ಸ್ಥಾಪಿಸಲ್ಪಡಬೇಕು.* ಮಾರ್ಪಟ್ಟವರು ಬಿದ್ದು ಹೋಗುವ ಸಾಧ್ಯತೆ ಇರುತ್ತದೆ. "ಮೊದಲನೆಯ ಆರು ತಿಂಗಳುಗಳು ನಿರ್ಣಾಯಕ ವಾದವುಗಳಾಗಿವೆ. ಆ ಅವಧಿಯೊಳಗೆ ದೇಹದೊಂದಿಗೆ ಒಂದುಗೂಡಿಸಲ್ಪಡದ ಹೊಸದಾದ ಜನರು ಹಿಂದಿನ ಬಾಗಿಲಿನಿಂದ ಹೊರಗೆ ಹೋಗುವ ದಾರಿಯಲ್ಲಿದ್ದಾರೆ."[7] ಅದು ಕ್ರಮ ಪ್ರಕಾರವಾಗಿರತಕ್ಕದ್ದು - ನಮ್ಮ ನೂತನ ಸದಸ್ಯನನ್ನು ನಮ್ಮ ಕೂಟಗಳಲ್ಲಿ ನೋಡುವುದು ಮತ್ತು ತಿಳಿಯುವುದು ಸಾಲದು; ನಾವು ಅನುದಿನವೂ ಅವನಿಗೆ ಉಪದೇಶಿಸಬೇಕು (ಇಬ್ರಿಯ 3:13).

ಅಗತ್ಯವಾಗಿರುವ ವೈಯಕ್ತಿಕ ಸಂಬಂಧಗಳ ರೀತಿಯನ್ನು ನಾವು ಹೇಗೆ ಸ್ಥಾಪಿಸ ಬೇಕು? (1) ಸಭೆಯಲ್ಲಿಯ ಜನರೊಂದಿಗೆ ವೈಯಕ್ತಿಕ ಸಂಬಂಧಗಳಲ್ಲಿ ಈಗಾಗಲೇ ಇರುವ ಜನರನ್ನು ನಾವು ಮಾರ್ಪಾಟಮಾಡಬಹುದು. (2) ನಾವು ಇತರರ ಅಗತ್ಯತೆ ಗಳ ಕಡೆಗೆ ಅರುಹುವುಳ್ಳವರಾಗಿರಬೇಕು. ಏಕಾಂತತೆ ಮತ್ತು ಬೇರ್ಪಡಿಸುವಿಕೆಗಳು ಆಧುನಿಕ ಮನುಷ್ಯನ ಪಿಡುಗುಗಳಾಗಿವೆ. ಜನರು ಸಭೆಯೊಳಗೆ ಬರುವಾಗ, ಅವರು ಹೆಚ್ಚಾಗಿ ಒಂದಾಗಿರುವದರ ಬಗ್ಗೆ ನೋಡುವರು. ಅವರು ಅದನ್ನು ಕಂಡು ಕೊಳ್ಳುವಂತೆ ನಿಶ್ಚಿತಪಡಿಸೋಣ. (3) ಸಾಧ್ಯ ವಾದಷ್ಟು ವಿಷಯಗಳಿಗೆ ಹೊಸದಾಗಿ ಮಾರ್ಪಾಟ ಹೊಂದಿದವನೊಂದಿಗೆ ಸಂಬಂಧವಿರಿಸಿ ಕೊಳ್ಳೋಣ. ನಾನು ಒಬ್ಬ ಬೋಧಕನಾಗಿ ಮತ್ತು ಅವನು ಕಲಿಯುವವನು ಆಗಿ ಅಂದರೆ

ನಾವು ಒಂದು ವಿಷಯದಲ್ಲಿ ಸಂಬಂಧಿಸಲ್ಪಟ್ಟಿದ್ದೇವೆ. ಅದು ನಮ್ಮನ್ನು ಒಂದು ಹಗ್ಗದಿಂದ ಒಬ್ಬರನ್ನೊಬ್ಬರನ್ನು ಬಂಧಿಸುತ್ತದೆ. ನಮಗೆ ಸಾಮಾನ್ಯವಾಗಿ ಮಕ್ಕಳಿರುವ ಸಂಗತಿಯಾಗಿ, ಒಂದೇ ಸ್ಥಳದಲ್ಲಿ ಕೆಲಸ ಮಾಡುವವರಾಗಿ, ಒಂದೇ ಹವ್ಯಾಸವಿರುವುದಾಗಿ, ಮತ್ತು ಅದೇ ಮನರಂಜನೆಯನ್ನು ಅನುಭವಿಸುವವರಾಗಿ, ನಾವು ಒಂದು ಮಾರ್ಗದಲ್ಲಿ ಅಲ್ಲ (ಬೋಧಕನಂತೆ ಮತ್ತು ಕಲಿಯುವವನಂತೆ), ಆದರೆ ಐದು ರೀತಿಯಲ್ಲಿ ಸಂಬಂಧಿಸಿರುತ್ತೇವೆ. ನಾವು, ಅಗಿದ್ದಂತೆ, ಐದು ಹಗ್ಗಗಳಿಂದ ಬಂಧಿಸಲ್ಪಟ್ಟಿರುತ್ತೇವೆ. ಆ ರೀತಿಯ ವೈಯಕ್ತಿಕ ಸಂಬಂಧವು ಹೆಚ್ಚಾಗಿ ನಾವು ಬೋಧಕ/ಕಲಿಯುವವನ ಮೇಲೆ ಮಾತ್ರಕ್ಕಿಂತ ನಾವು ಸಂಬಂಧಿಸಲ್ಪಟ್ಟ ಒಂದರಲ್ಲಿ ಹೊಸದಾಗಿ ಮಾರ್ಪಾಟ ಹೊಂದಿದವನಿಗೆ ಸಹಾಯ ಮಾಡಬಹುದು. (4) ಹೊಸದಾಗಿ ಮಾರ್ಪಾಟ ಹೊಂದಿದವನು ಸಾಧ್ಯವಾದಷ್ಟು ಸದಸ್ಯರೊಂದಿಗೆ ಸಂಬಂಧಿಸಲ್ಪಟ್ಟವನಾಗಲು ನಾವು ಸಹಾಯ ಮಾಡಬಹುದು. (5) ಅತಿಥಿ ಸತ್ಕಾರವನ್ನು ನಾವು ರೂಢಿಸತಕ್ಕದ್ದು ಮತ್ತು ಅನ್ಯೋನ್ಯತೆಯನ್ನು ಒತ್ತಿ ಹೇಳ ಬಹುದು; ಆಹಾರವನ್ನು ಹಂಚಿ ಕೊಳ್ಳುವದರ ಮುಖಾಂತರ, ವೈಯಕ್ತಿಕ ಸಂಬಂಧಗಳು ಸ್ಥಾಪಿಸಲ್ಪಡುತ್ತವೆ. (6) ಸಾಧ್ಯ ವಾದಷ್ಟು ಮಟ್ಟಿಗೆ ಸಭೆಯ ಕಾರ್ಯ ಕ್ರಮದಲ್ಲಿ ಜನರನ್ನು ಬೇಗನೇ ತೊಡಗಿಸಬೇಕು - ಬೈಬಲ್ ಕ್ಲಾಸುಗಳಲ್ಲಿ ಭಾಗವಹಿಸುವುದು, ವ್ಯವಹಾರದ ಕೂಟಗಳಲ್ಲಿ ಭಾಗವಹಿಸುವುದು, ಆರಾಧನೆಯಲ್ಲಿ ನಡಿಸುವುದು, ಮತ್ತು ಇತರ ಸದಸ್ಯರೊಂದಿಗೆ ಕೆಲಸ ಮಾಡುವುದು. ನಾವು ಒಂದಾಗಿ ಕೆಲಸ ಮಾಡುವಂತೆ, ನಮ್ಮ ವೈಯಕ್ತಿಕ ಸಂಬಂಧಗಳನ್ನು ನಾವು ಬಲಗೊಳಿಸಬೇಕು.

*ಕಾರ್ಯ ಕ್ರಮದ ಮೂರನೆಯ ಭಾಗವು ಎಲ್ಲಾ ಸದಸ್ಯರನ್ನು ನಂಬಿಗಸ್ತರಾಗಿಡಲು ಅಪನಂಬಿಗಸ್ತರಾದವರನ್ನು ಕೂಡಲೇ ಹುಡುಕುವುದು.* ಒಬ್ಬರಿಂದೊಬ್ಬರಿಗೆ ನಮ್ಮ ಸಮರ್ಪಣೆಯು ಹೋರಾಟವಿಲ್ಲದೆ ನಮ್ಮನ್ನು ಒಟ್ಟಾಗಿ ಬಂಧಿಸುವ ಬಂಧನಗಳನ್ನು ಯಾರಾ ದರೂ ಮುರಿಯದಂತೆ ಗಂಭೀರವಾಗಿರ ತಕ್ಕದ್ದು. ತಪ್ಪು ಮಾಡುವವರನ್ನು ಹಿಂದಿರುಗಿ ತರುವದನ್ನು ಬೈಬಲು ಕೇಳುತ್ತದೆ: "ನಿಮ್ಮಲ್ಲಿ ಯಾರಾದರೂ ಯಾವುದೋ ಒಂದು ದೋಷ ದಲ್ಲಿ ಸಿಕ್ಕಿದರೆ ಅಂಥವನನ್ನು ಆತ್ಮನಿಂದ ನಡಿಸಿಕೊಳ್ಳುವ ನೀವು ಶಾಂತಭಾವದಿಂದ ತಿದ್ದಿ ಸರಿಮಾಡಿರಿ ..." (ಗಲಾತ್ಯ 6:1; RSV; ಯಾಕೋಬ 5:19, 20 ಸಹ ನೋಡಿರಿ).

ಅಲೆಯುವವರನ್ನು ಹುಡುಕುವ ಜವಾಬ್ದಾರಿಕೆ ನಮಗಿರುವುದು ಮಾತ್ರವಲ್ಲದೆ, ಅವರನ್ನು ನಾವು ಕೂಡಲೇ ಹುಡುಕಬೇಕು! ಎರಡು ತಿಂಗಳು ಕಾಯುವುದು (ಎರಡು ವರ್ಷಗಳು ಬಹಳ ಕಡಿಮೆ) ಬಹಳ ದೀರ್ಘಕಾಲವಾಗಿದೆ! ಊಟದ ಸಮಯದಲ್ಲಿ ಖಾಲಿಯಾಗಿರುವ ಯುವಕ ಜಾನಿಯ ಖುರ್ಚಿಯು ಇರುವ ಮನೆಯನ್ನು, ಮತ್ತು ಯಾರು ಅವನ ಬಗ್ಗೆ ಆಶ್ಚರ್ಯಪಡದಿರುವದನ್ನು, ಅವನ ಬಗ್ಗೆ ಯಾರೂ ಹುಡುಕಲಿಕ್ಕೆ ಹೋಗದಿರುವುದನ್ನು ಕಲ್ಪಿಸಿಕೊಳ್ಳಿರಿ. ಯಾರೋ ಒಬ್ಬರು, "ಇತ್ತಿಚೆಗೆ ಜಾನಿಯನ್ನು ಯಾರಾದರೂ ನೋಡಿರುವ ರೋ? ಇಲ್ಲ? ನಾವು ಹೋಗಿ ಅವನನನ್ನು ಕಂಡು ಕೊಳ್ಳಬಹುದು" ಎಂದು ಹೇಳಿದರೆ ಹೇಗೆ, ಅಂಥ ಕುಟುಂಬದಲ್ಲಿ ಯಾರೂ ಜೀವಿ ಸಲಿಕ್ಕೆ ಬಯಸುವದಿಲ್ಲ. ನಿಶ್ಚಿಯವಾಗಿ, ಸಭೆಯು ಆ ಕುಟುಂಬದ ರೀತಿಯಂಥದ್ದು ಆಗಿರಬಾರದು. ಹಾಜರಿಲ್ಲದವರ ಬಗ್ಗೆ ನಾವು ತಿಳಿದುಕೊಳ್ಳುವ ಅಗತ್ಯತೆಯಿದೆ. ಅವರ ಬಗ್ಗೆ ಚಿಂತಿಸುವವರಾಗಿರಿ, ಕೂಡಲೇ ಅವರನ್ನು ಹಿಂದಿರುಗಿ ಕರಕೊಂಡು ಬನ್ನಿರಿ. ಅವರು ತಪ್ಪಿಹೋಗಿದ್ದರೂ ಕರೆದು ಕೊಂಡು ಬನ್ನಿರಿ.

*ಅಲೆಯುತ್ತಿರುವ ಕುರಿಯನ್ನು ನಾವು ಹುಡುಕವ ಮಾರ್ಗಕ್ಕಿಂತ ಅವುಗಳನ್ನು ಹುಡುಕುವ ಅಗತ್ಯತೆಯಷ್ಟು ಮಹತ್ವದ್ದಾಗಿವದಿಲ್ಲ!* ಕೆಲವು ಸಲ, ನಾವು ತಪ್ಪಾದ ಕಾರ್ಯವನ್ನು ಉಪಯೋಗಿಸುವೆವೆಂದು ಭಯವುಳ್ಳವರಾಗಿ ಏನನ್ನೂ ಮಾಡದೇ ಹೋಗುತ್ತೇವೆ. ಆ ಅಂಶವನ್ನು ಈ ಕೆಳಗಿನ ಕಥೆಯು ಉದಾಹರಿಸಬಹುದು:

ಕಠಿಣನಾದ, ವಿದ್ಯೆಯಿಲ್ಲದ ಮನುಷ್ಯನು, ಹೊಸದಾಗಿ ಮಾರ್ಪಾಟಹೊಂದಿದವನು ಕರ್ತನಿಗಾಗಿ ಕಾರ್ಯಮಾಡಲು ಆವೇಶಭರಿತನಾದನು. ಏನಾದರೂ ಮಾಡುವದಕ್ಕಾಗಿ

ಅವನು ಪ್ರಸಂಗಿಯನ್ನು ಕೇಳಿಕೊಂಡನು. ಹೆಚ್ಚು ಯೋಗ್ಯವಾದ ಕೆಲಸವನ್ನು ತಿಳಿಯದೇ, ಪ್ರಸಂಗಿಯು ಇತ್ತಿಚೆಗಿನ ದಿನಗಳಲ್ಲಿ ಹಾಜರಿರುವಲ್ಲಿ ಅಪನಂಬಿಗಸ್ತರಾಗಿದ್ದ ಜನರ ಒಂದು ಯಾದಿಯನ್ನು ಅವನಿಗೆ ತೋರಿಸಿ ಅವನಿಗೆ ಸ್ವಲ್ಪ ಸ್ಟೇಶನರಿಯನ್ನು ಕೊಟ್ಟು, "ಈ ಜನರು ಹೆಚ್ಚು ಕ್ರಮ ಪ್ರಕಾರವಾಗಿ ಹಾಜರಾಗುವಂತೆ ಪ್ರೋತ್ಸಾಹಿಸಿ ನೀನು ಬರೆಯ ಬಹುದು" ಎಂದು ಹೇಳಿದನು. ಆ ಹೊಸ ಕ್ರೈಸ್ತನು ಆಸಕ್ತಿಯಿಂದ ಸ್ವೀಕರಿಸಿ ಅಲ್ಲಿಂದ ಹೋದನು. ಸ್ವಲ್ಪ ದಿನಗಳ ನಂತರ ಸಭೆಯ ಸದಸ್ಯನಾಗಿದ್ದ ಒಬ್ಬ ಡಾಕ್ಟರನಿಂದ ಪ್ರಸಂಗಿಗೆ ಒಂದು ಪತ್ರ ಬಂದಿತು. ಅದರಲ್ಲಿ ಹೀಗಿತ್ತು:

> ಪ್ರಿಯ ಸಹೋದರ ಜೊನ್ಸ್,
>
> ಹಾಜರಿರುವದರಲ್ಲಿ ನನ್ನ ಅಲಕ್ಷತತೆಯ ಬಗ್ಗೆ ಸಹೋದರ ಜಾರ್ಜ ಅವರಿಂದ ಒಂದು ಪತ್ರವನ್ನು ಸ್ವಿಕರಿಸಿದೆನು. ಪ್ರತಿಯೊಂದು ಆರಾಧನೆಯಲ್ಲಿ ಭಾಗವಹಿಸಲಿಕ್ಕಾಗುವಂತೆ ನನ್ನ ಕೆಲಸಕ್ಕೆ ಸಮಯ ಬೇಕಾದದ್ದರ ಬಗ್ಗೆ ನೀವು ತಿಳಿದವರಾಗಿದ್ದೀರಿ. ಹೀಗಿದ್ದರು ಇನ್ನು ಮುಂದೆ ಹೆಚ್ಚು ಚೆನ್ನಾಗಿರಲು ಪ್ರಯತ್ನಿಸು ತ್ತೇನೆ, ಈ ಮದ್ಯೆ ನಾನು ತಪ್ಪಿಸಿಕೊಂಡ ಭಾನುವಾರಗಳಿಗಾಗಿ ನನ್ನ ಕೊಡುಗೆಯ ಚೆಕ್ಕನ್ನು ಇದರೊಂದಿಗೆ ಲಗತ್ತಿಸಿದ್ದೇನೆ. ಮಿಶನ್ ಫಂಡಿಗಾಗಿ ಸ್ವಲ್ಪ ಹಣಕೊಡುತ್ತಿದ್ದೇನೆ. ನನ್ನ ಜವಾಬ್ದಾರಿಕೆಯನ್ನು ಜ್ಞಾಪಿಸಿದ್ದಕ್ಕಾಗಿ ನಿಮಗೆ ಕೃತಜ್ಞತೆಗಳು.
>
> ಕ್ರಿಸ್ತನಲ್ಲಿ ನಿಮ್ಮವನು
> ಡಾ. ಜೊನ್ ಸ್ಮಿತ್
>
> P.S. Please tell brother George that the word "dirty" has only one "t" and there is no "c" in "skunk."[8]

ಅತೀ ಹೆಚ್ಚು ಮಹತ್ವದ ಸಂಗತಿಯು ತಪ್ಪಿ ಹೋದವರನ್ನು ಹೇಗೆ ನಾವು ಹುಡುಕಬೇಕೆಂಬುದು ಬಹಳ ಮಹತ್ವದ್ದಾಗಿರುವದಿಲ್ಲ; ಅದು ಅದನ್ನು ಮಾಡುವುದಾಗಿದೆ!

10:22-25ರ ಮೂರನೆಯ ಅಗತ್ಯತೆಯು ಸಭೆಯ ನಾಯಕರು ಸಭೆಯೊಳಗೆ "ಕುಟುಂಬ ಭಾವನೆಯನ್ನು" ಉತ್ಪಾದಿಸುವ ಕಾರ್ಯಕ್ರಮಗಳನ್ನು ರೂಪಿಸುವ ಅಗತ್ಯತೆಯನ್ನು ಅನ್ವಯಿಸುತ್ತದೆ. ಮತ್ತು (1) ಕ್ರೈಸ್ತರು ಒಬ್ಬರಿಗೊಬ್ಬರು ಜವಾಬ್ದಾರರಾಗಿದ್ದಾರೆ; (2) ಸದಸ್ಯರ ಮಧ್ಯದಲ್ಲಿ ವಿಶೇಷವಾಗಿ ಹೊಸ ಸದಸ್ಯರಲ್ಲಿ ಹಾಗೂ ನಂಬಿಕೆಯಲ್ಲಿ ಹೆಚ್ಚು ಪ್ರಬುಧ್ಧರಾದವರ ಮಧ್ಯದಲ್ಲಿ ನಿಕಟ ಸಂಬಂಧವು ಬೆಳೆಯುವಂತೆ; ಮತ್ತು (3) ಅಪನಂಬಿಗಸ್ತ ಸದಸ್ಯರು ಬಿದ್ದು ಹೋಗಲು ಪ್ರಾರಂಭಿಸುವಂತೆ ಅವರನ್ನು ತಲುಪಲು ಪ್ರಯತ್ನ ಮಾಡುವಂತೆ ನಮ್ಮನ್ನು ನಡಿಸುತ್ತದೆ.

## ಮುಕ್ತಾಯ

ಇಬ್ರಿಯ 10:19-25 ವಚನಗಳು ಬಿದ್ದು ಹೋದವರ ಸಮಸ್ಯೆಯನ್ನು ಪರಿಹರಿಸಲು ಬಯಸುವ ನಾಯಕರು ಈ ಗುರಿಗಳನ್ನು ಸಾಧಿಸುವ ಕಾರ್ಯಕ್ರಮಗಳನ್ನು ರೂಪಿಸುವ, ಪ್ರಸಾರ ಮಾಡುವ ಮತ್ತು ಕಾಪಾಡುವ ಅಗತ್ಯತೆಯಿದೆ ಎಂದು ಸೂಚಿಸುತ್ತದೆ:

- ಪ್ರತಿಯೊಬ್ಬ ಸದಸ್ಯನು ದೇವರ ವಾಕ್ಯವನ್ನು ಬೋಧಿಸಲ್ಪಡುವದನ್ನು ನೋಡುವಂತೆ ಪ್ರಯತ್ನಿಸಿರಿ.
- ವೈಯಕ್ತಿಕ ಕ್ರೈಸ್ತರು ಸತತವಾಗಿ ದೇವರ ಸಮೀಪಕ್ಕೆ ಬರುವಂತೆ

ಪ್ರೋತ್ಸಾಹಿಸಿರಿ.

- ಕಷ್ಟಗಳನ್ನು ಎದುರಿಸಿ ನಿಲ್ಲಲು ಬಲವಾದ ನಂಬಿಕೆಯನ್ನು ಬೆಳಸಿ ಕೊಳ್ಳಲು ಕ್ರೈಸ್ತರಿಗೆ ಸಹಾಯ ಮಾಡಿರಿ.
- ಸದಸ್ಯರ ಮಧ್ಯದಲ್ಲಿ ಸತತವಾಗಿ ಪರಸ್ಪರ ಪ್ರೋತ್ಸಾಹವು ಮುಂದುವರಿ ಯುವಲ್ಲಿ ಪರಿಣಾಮಗೊಳ್ಳಿರಿ.

"ಸಾಮಾನ್ಯವಾಗಿ" ಇಲ್ಲವೇ "ನಿರ್ವಾಹವಿಲ್ಲದೇ" ನಮ್ಮ ಸದಸ್ಯರಲ್ಲಿ ನೂರರಲ್ಲಿ ಐವತ್ತರಷ್ಟನ್ನು ಕಳೆದು ಕೊಳ್ಳುವದನ್ನು ಸ್ವೀಕರಿಸಬಾರದು. ನಮ್ಮ ಪ್ರಯತ್ನಗಳಿದ್ದರೂ, ಕೆಲವರು ಬಿದ್ದು ಹೋಗುವರು. ಯೇಸುವು ತನ್ನ ಬೋಧಕನಾಗಿದ್ದರೂ ಯೂದನು ಬಿದ್ದು ಹೋದಂತೆ ಬಿದ್ದು ಹೋಗಬಹುದು. ಅದು ನಿಯಮದಂತೆ ಸಂಭವಿಸುವದನ್ನು ನಾವು ನಿರೀಕ್ಷಿಸಬಾರದು, ಇಲ್ಲವೇ ಸಮಸ್ಯೆಗೆ ನಿರಾಶರಾಗಬಾರದು.

ಪ್ರತಿಯೊಬ್ಬ ಕ್ರೈಸ್ತನು ಅಮೂಲ್ಯನಾಗಿದ್ದಾನೆ. ಒಬ್ಬನನ್ನದರೂ ಕಳೆದು ಕೊಳ್ಳು ವದನ್ನು ನಾವು ಬಯಸುವದಿಲ್ಲ! ಲೂಕ 15:4-6ರಲ್ಲಿ ಒಬ್ಬ ಕುರುಬನು ನೂರು ಕುರಿಗಳಲ್ಲಿ ಒಂದು ಕುರಿಯನ್ನು ಕಳೆದು ಕೊಂಡ ಕಥೆಯನ್ನು ಯೇಸು ಹೇಳಿದನು. ಅವನಿಗೆ ತೃಪ್ತಿಯಿತ್ತೋ? "ನನಗೆ 99 ಶತ ಯಶಸ್ಸಾಗಿದೆ" ಎಂದು ಹೇಳಿದನೋ? ಇಲ್ಲ, ಕಳೆದು ಹೋದ ಒಂದು ಸಿಕ್ಕುವವರೆಗೆ ಕುರುಬನು ಹುಡುಕುತ್ತ ಹೋದನು! ಒಂದು ಕುರಿ - ಒಂದು ಪ್ರಾಣ - ಯೇಸುವಿಗೆ ಅಮೂಲ್ಯವಾಗಿತ್ತು! ಪ್ರತಿಯೊಬ್ಬರೂ ನಮಗೆ, ವಿಶೇಷವಾಗಿ ಆ ಒಬ್ಬನು ನಮ್ಮ ಸಹೋದರ ಇಲ್ಲವೇ ಸಹೋದರಿಯಾಗಿದ್ದರಿಂದ ಅಮೂಲ್ಯರಾಗಿದ್ದಾರೆ!

---

ಟಿಪ್ಪಣೆಗಳು

[1]This lesson borrows freely from Coy Roper, "keeping the Saved Saved," *Truth for Today* 11 (June 1990): 44-49. [2]ಇಬ್ರಿಯ 13:1-6 ಮತ್ತು ಇತರ ವಚನಗಳ ವ್ಯಾವಹಾರಿಕ ಅಗತ್ಯತೆಗಳ ಸಾಧ್ಯತೆ ಇತ್ತು, ಅದು ಸಭೆಯಲ್ಲಿಯ ವಿಶೇಷ ಅಗತ್ಯತೆಗಳನ್ನು ಇಲ್ಲವೇ ಬಲಹೀನತೆಗಳನ್ನು ಪ್ರತಿಬಿಂಬಿಸಿತು. [3]ಸ್ಪಷ್ಟವಾಗಿ, ಇಬ್ರಿಯ 10:25ರಲ್ಲಿ "ದಿನದ" ಇತರ ವ್ಯಾಖ್ಯಾನಗಳು ಇರುತ್ತವೆ. ಈ ವಾಕ್ಯ ಭಾಗದ ಇತರ ಭಾಗಗಳ ಇತರ ವ್ಯಾಖ್ಯಾನಗಳು ಇರುವಂತೆ. [4]Flavil R. Yeakley, Jr., *Why Churches Grow,* 2d ed. (Arvada, Colo.: Christian Communications, 1979), 72. [5]Ibid., 54. See also Win Arn and Charles Arn, "Closing the Evangelistic Back Door," *Leadership* (Spring 1984): 29. [6]Cited by Arn and Arn, 29. [7]Ibid., 30. [8]ಇದು ನನ್ನ ಒಂದು ಮೆಚ್ಚಿನ ಕಥೆಗಳಲ್ಲಿ ಒಂದಾಗಿರುವಾಗ, ನಾನು ಅದನ್ನು ಮೊದಲು ಎಲ್ಲಿ ಕೇಳಿದೆನೆಂಬ ಮತ್ತು ಅದಕ್ಕೆ ಯಾರು ಮೂಲಕಾರಣರು ಎಂಬುದು ನನಗೆ ತಿಳಿದಿರುವದಿಲ್ಲ.